

ಗಾಂಧೀ ಚಿಂತನೆಗಳ ಅನುಷ್ಠಾನಕ್ಕೆ ಪೂರಕವಾದ ಕಾರ್ಯಕ್ರಮಗಳು ಸಿದ್ದರಾಮಯ್ಯ ಸರ್ಕಾರದಲ್ಲಿ ಬಿರುಸಿನಿಂದ ನಡೆಯುತ್ತಿವೆ. ಪ್ರತೀ ಜಿಲ್ಲೆಯಲ್ಲಿ ತಲಾ ಮೂರು ಕೋಟಿ ರೂಗಳ ವೆಚ್ಚದಲ್ಲಿ ಗಾಂಧೀ ಭವನ ನಿರ್ಮಿಸುವ ಯೋಜನೆಯನ್ನು ಇಡೀ ರಾಷ್ಟ್ರದಲ್ಲಿಯೇ ಯಾರೂ ಮಾಡಿಲ್ಲ. ಸಿದ್ದರಾಮಯ್ಯನವರು ಗಾಂಧೀಜಿ ಹೆಸರಿನ ಕಾರ್ಯಕ್ರಮಗಳಿಗೆ ನೋ ಎನ್ನುವ ಪ್ರಶ್ನೆಯೇ ಇಲ್ಲ ಎನ್ನುತ್ತಾರೆ. ಇದು ಗಾಂಧೀಜಿ ಅವರ ಚಿಂತನೆಗಳ ಬಗ್ಗೆ ಅವರಿಗಿರುವ ಬದ್ಧತೆ.

**ಹೋ ಶ್ರೀನಿವಾಸಯ್ಯ,, ಹಿರಿಯ ಗಾಂಧೀವಾದಿಗಳು**

ಫಲಾನುಭವಿಗಳಿಂದ ಜನಾಭಿಪ್ರಾಯ ಕಾರ್ಯಕ್ರಮ ಆರಂಭವಾಗುವ ತನಕ ಸಚಿವ ಸಂಪುಟದ ಸಹೋದ್ಯೋಗಿಗಳ ಜೊತೆ ಕುಳಿತಿದ್ದ ಮಾನ್ಯ ಮುಖ್ಯಮಂತ್ರಿಗಳು ನಂತರ ವಿವಿಧ ಜಿಲ್ಲೆಗಳಿಂದ ಜನಮನ ಸಮಾವೇಶಕ್ಕೆಂದೇ ವಿಶೇಷವಾಗಿ ಆಗಮಿಸಿದ್ದ ಫಲಾನುಭವಿಗಳ ನಡುವೆಯೆ ಕುಳಿತು ಜನಾಭಿಪ್ರಾಯ ಆಲಿಸಿದರು. ಸಹಜವಾಗಿಯೇ ಸರ್ಕಾರದ ಜನಪ್ರಿಯ ಹಾಗೂ ಜನಪರ ಕಾರ್ಯಕ್ರಮವಾದ ಅನ್ನಭಾಗ್ಯ ಯೋಜನೆಯ ಯಶಸ್ಸಿನ ಬಗ್ಗೆ ಫಲಾನುಭವಿಗಳು ಮೆಚ್ಚುಗೆಯ ಮಾತುಗಳನ್ನಾಡಿದರು. ಅನ್ನಭಾಗ್ಯ ಯೋಜನೆಯಿಂದ ನಮಗೆ ಪ್ರತಿ ತಿಂಗಳು ಕನಿಷ್ಠ ೭೦೦ ರಿಂದ ೮೦೦ ರೂ ಉಳಿತಾಯವಾಗುತ್ತದೆ. ಅನ್ನದ ಸಮಸ್ಯೆಯಂತೂ ನಮಗೆ ಇಲ್ಲವೇ ಇಲ್ಲ. ಗುಣಮಟ್ಟದ ಆಹಾರಧಾನ್ಯ ಮನೆಯ ಮುಂದೆ ಸಿಗುತ್ತಿದೆ ಎಂದು ಕೆಲವು ಫಲಾನುಭವಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

ಕ್ಷೀರಭಾಗ್ಯ ಯೋಜನೆಯ ಬಗ್ಗೆ ಶಾಲಾಮಕ್ಕಳು ಖುಷಿಯಿಂದ ಮಾತನಾಡಿದರು. ಉಚಿತ ಹಾಲಿನಿಂದಾಗಿ ನಮ್ಮ ಪೌಷ್ಟಿಕಾಂಶ ಹೆಚ್ಚಾಗಿದೆ. ಉಚಿತ ಹಾಲಿನ ಸೌಕರ್ಯವನ್ನು ವಾರದಲ್ಲಿ ಆರು ದಿನ ನೀಡುವಂತೆ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಂಡರು.

ಈ ಸರ್ಕಾರ ಬರುವುದಕ್ಕೆ ಮುಂಚೆ ಪ್ರತಿ ಲೀಟರ್ ಹಾಲಿಗೆ ನೀಡುತ್ತಿದ್ದ ೨ ರೂಗಳ ಪ್ರೋತ್ಸಾಹ ಧನವನ್ನು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರ ಸ್ವೀಕರಿಸಿದ ದಿನವೇ ನಾಲ್ಕು ರೂಗಳಿಗೆ ಏರಿಕೆ ಮಾಡಿದ್ದನ್ನು ಹಲವಾರು ಫಲಾನುಭವಿಗಳು ಕೃತಜ್ಞತೆಯಿಂದ ಸ್ಮರಿಸಿಕೊಂಡರು. ಒಂದೆರಡು ಹಸು, ಎಮ್ಮೆಗಳನ್ನು ಸಾಕಿಕೊಂಡು ಕಷ್ಟದ ಜೀವನ ನಡೆಸುತ್ತಿದ್ದ ಹಲವರು ಈ ಕ್ಷೀರಧಾರೆ ಯೋಜನೆಯಿಂದ ಅನುಕೂಲ ಪಡೆದು ತಾವು ಈಗ ನೆಮ್ಮದಿಯ ಜೀವನ ನಡೆಸುತ್ತಿದ್ದೇವೆ. ತಮ್ಮ ಮಕ್ಕಳಿಗೆ ಇಂಜಿನಿಯರಿಂಗ್ ಶಿಕ್ಷಣ ಕೊಡಿಸುತ್ತಿದ್ದೇವೆ. ಈಗ ಆರು ಹಸುಗಳನ್ನು ಸಾಕಿ ಕೈತುಂಬಾ ಹಣ ಸಂಪಾದಿಸುತ್ತಿದ್ದೇವೆ ಎಂದು ತಮ್ಮ ಅನುಭವಗಳನ್ನು ಹಂಚಿಕೊಂಡರು. ಹಾಲಿಗೆ ನೀಡುವ ಪ್ರೋತ್ಸಾಹ ಧನ ನೇರವಾಗಿ ನಮ್ಮ ಬ್ಯಾಂಕ್ ಖಾತೆಗೆ ಜಮಾ ಆಗುವುದರಿಂದ ಯಾವುದೇ ರೀತಿಯ ಮಧ್ಯವರ್ತಿಗಳ ಕಾಟವಿಲ್ಲದೆ ಪೂರ್ಣ ಹಣ ತಮಗೆ ಸಕಾಲದಲ್ಲಿ ದೊರೆಯುತ್ತದೆ ಎಂದು ತೃಪ್ತಿ ವ್ಯಕ್ತಪಡಿಸಿದರು.

ಸಣ್ಣಪುಟ್ಟ ಸ್ವಯಂ ಉದ್ದಿಮೆಗಾಗಿ ಬ್ಯಾಂಕ್‌ನಲ್ಲಿ ಮಾಡಿದ್ದ ಸಾಲ ತೀರಿಸಲಾಗದೆ ಭಾದೆಯಿಂದ ಬಳಲುತ್ತಿದ್ದ ಹಲವರು ತಮ್ಮ ಬದುಕಿಗೆ ಋಣಮುಕ್ತ ಯೋಜನೆ ಹೊಸ ಬೆಳಕಾಗಿ ಬಂತು ಎಂದು ಸರ್ಕಾರಕ್ಕೆ ಧನ್ಯತೆಯಿಂದ ಕೈ ಮುಗಿದು ಸ್ಮರಿಸಿದರು.

ಮನಸ್ವಿನಿ ಯೋಜನೆಯಡಿ ಪ್ರತಿ ತಿಂಗಳು ೫೦೦ ರೂಗಳ ಮಾಸಾಶನ ಪಡೆಯುತ್ತಿರುವ ಮದುವೆಯಾಗದೆ ಉಳಿದಿರುವ ಮಹಿಳೆಯರು ನೊಂದ ಮಹಿಳೆಯರ ಕಷ್ಟಗಳನ್ನು ಅರಿತು ನೆರವಿನ ಹಸ್ತ ಚಾಚಿದ ಸರ್ಕಾರದ ಮಾನವೀಯ ಅಂತಃಕರಣವನ್ನು ಅಭಿನಂದಿಸಿದರು. ವಿದ್ಯಾಸಿರಿ ಹೆಸರೇ ಹೇಳುವಂತೆ ನಮ್ಮ ಪಾಲಿಗೆ ಸಿರಿಯಾಗಿಯೇ ಬಂದಿದೆ ಎಂದು ಹಲವು ವಿದ್ಯಾರ್ಥಿಗಳು ಈ ಯೋಜನೆಯ ಫಲವನ್ನು ಬಣ್ಣಿಸಿದರು.

ಹಿಂದುಳಿದ ವರ್ಗಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಐ.ಎ.ಎಸ್., ಐ.ಪಿ.ಎಸ್. ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಪಡೆಯಲು ಸರ್ಕಾರ ನೀಡುತ್ತಿರುವ ಧನಸಹಾಯ ಯೋಜನೆಯಡಿ ಐ.ಎ.ಎಸ್‌ಗೆ ಆಯ್ಕೆಯಾಗಿರುವ ಕೆಲ ಯುವಕರು ಸರ್ಕಾರದ ಈ ಯೋಜನೆಯನ್ನು ಕೊಂಡಾಡಿದರು. ತಮ್ಮ ಪಾಲಿಗೆ ಗಗನಕುಸುಮವಾಗಿದ್ದ ಐ.ಎ.ಎಸ್ ಹುದ್ದೆಯನ್ನು ನಿಜಕುಸುಮವನ್ನಾಗಿ ಮಾಡಿದ ಸರ್ಕಾರಕ್ಕೆ ಕೃತಜ್ಞತೆ ಅರ್ಪಿಸಿದರು.

ಶಿವಮೊಗ್ಗದ ಪುಟ್ಟ ಬಾಲಕನೊಬ್ಬ ದಿಟ್ಟತನದಿಂದ ತನ್ನ ಭಾವನೆಯನ್ನು ಮುಖ್ಯಮಂತ್ರಿಗಳ ಬಳಿ ತೋಡಿಕೊಂಡಿದ್ದು ವಿಶೇಷವಾಗಿತ್ತು. ಸರ್ಕಾರದ ಬಹುತೇಕ ಸವಲತ್ತುಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಮಾತ್ರ ದೊರಕುತ್ತಿವೆ. ಮೇಲ್ವರ್ಗಕ್ಕೆ ಸೇರಿದ ನಮ್ಮಂತಹ ಬಡವರಿಗೂ ಕೂಡ ಸರ್ಕಾರದ ಕೆಲವು ಸವಲತ್ತುಗಳು ದೊರಕುವಂತೆ ಯೋಜನೆಗಳನ್ನು ರೂಪಿಸಬೇಕೆಂದು ನೇರವಾಗಿ ಮುಖ್ಯಮಂತ್ರಿಗಳಿಗೆ ಕೇಳಿದ್ದು ಇಡೀ ಜನಮನ ಕಾರ್ಯಕ್ರಮದಲ್ಲಿ ಎಲ್ಲರ ಗಮನ ಸೆಳೆಯಿತು.

ಇದೇ ರೀತಿ ಕೃಷಿಭಾಗ್ಯ ಯೋಜನೆಯಡಿ ತನಗೆ ಸಿಗಬೇಕಾದ ಸವಲತ್ತುಗಳನ್ನು ನೀಡಲು ಅಧಿಕಾರಿಗಳು ನಿರಾಕರಿಸುತ್ತಿರುವುದನ್ನು ನೇರವಾಗಿ ಮುಖ್ಯಮಂತ್ರಿಗಳಿಗೆ ದೂರು ನೀಡುವ ಮೂಲಕ ಮತ್ತೊಬ್ಬ ರೈತರು ಗಮನ ಸೆಳೆದರು. ಅಧಿಕಾರಿಗಳು ಲಂಚದ ನಿರೀಕ್ಷೆಯಿಂದ ನಮಗೆ ಯೋಜನೆಯ ನೆರವು ನೀಡದೆ ಸತಾಯಿಸುತ್ತಿದ್ದಾರೆ ಎಂದು ಎಲ್ಲರ ಸಮ್ಮುಖದಲ್ಲಿ ಯಾವುದೇ ಹಿಂಜರಿಕೆಯಿಲ್ಲದೆ ದೂರು ನೀಡಿದ್ದು ಜನಮನ ಕಾರ್ಯಕ್ರಮದ ವಿಶ್ವಾಸಾರ್ಹತೆಗೆ ಇನ್ನೊಂದು ಸಾಕ್ಷಿಯಾಯಿತು.



ಸಿದ್ದರಾಮಯ್ಯನವರು ದೇವರಾಜ ಅರಸು ನಂತರದ ಸಮರ್ಥ ನಾಯಕರು. ಜನರಿಗೆ ಏನು ಬೇಕು, ಅವರಿಗೆ ಏನನ್ನು ನೀಡಬೇಕು ಎನ್ನುವುದು ಅವರಿಗೆ ಚೆನ್ನಾಗಿ ಗೊತ್ತಿದೆ. ಯೋಜನೆಗಳ ಅನುಷ್ಠಾನದಲ್ಲಿ ಅವರಿಗೆ ಯಶಸ್ಸು ಸಿಗಲಿ.

**ಆ.ನ. ಯಲ್ಲಪ್ಪರೆಡ್ಡಿ, ಪರಿಸರ ಚಿಂತಕರು**

ಸುಮಾರು ಮೂರು ಗಂಟೆಗಳ ಕಾಲ ಜನಾಭಿಪ್ರಾಯ ಆಲಿಸಿದ ಮುಖ್ಯಮಂತ್ರಿಗಳು ಮೂರು ವರ್ಷದ ತಮ್ಮ ಸರ್ಕಾರದ ಆಡಳಿತ ಫಲಶ್ರುತಿಯನ್ನು ತಮ್ಮದೇ ನಿಧಾನ ಶೈಲಿಯಲ್ಲಿ ಎಳೆಎಳೆಯಾಗಿ ಸಭಿಕರ ಮುಂದೆ ಬಿಡಿಸಿಟ್ಟರು. ಮೇ೧೩, ೨೦೧೩ರಂದು ಸಹಸ್ರಾರು ಸಾರ್ವಜನಿಕರ ಸಮ್ಮುಖದಲ್ಲಿ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಸಂದರ್ಭವನ್ನು ಸ್ಮರಿಸಿಕೊಂಡರು. ಚುನಾವಣೆಯ ಸಂದರ್ಭದಲ್ಲಿ ಜನತೆಗೆ ನೀಡಿದ್ದ ಭರವಸೆಗಳಲ್ಲಿ ಶೇಕಡ ೧೦೦ಕ್ಕೂ ಹೆಚ್ಚು ಭರವಸೆಗಳನ್ನು ಈಡೇರಿಸಿ ನಾವು ನುಡಿದಂತೆ ನಡೆದಿದ್ದೇವೆ ಎಂದು ಹೆಮ್ಮೆಯಿಂದ ಹೇಳಿಕೊಂಡರು.

ಶಾಲಾ ಮಕ್ಕಳಿಗೆ ಮೀಸಲಾದ ಕ್ಷೀರಭಾಗ್ಯ ಯೋಜನೆಯನ್ನು ಮಕ್ಕಳ ಆಶಯಕ್ಕೆ ಅನುಗುಣವಾಗಿ ವಾರದಲ್ಲಿ ಆರು ದಿನಗಳಿಗೆ ವಿಸ್ತರಿಸುವುದಾಗಿ ಮುಖ್ಯಮಂತ್ರಿಯವರು ವೇದಿಕೆಯಲ್ಲೇ ಭರವಸೆ ನೀಡಿದರು. ಕೃಷಿಭಾಗ್ಯ ಯೋಜನೆಯ ಅಡಿಯಲ್ಲಿ ಕಳಪೆ ಪ್ಲಾಸ್ಟಿಕ್ ಹಾಳೆಗಳು ಪೂರೈಕೆಯಾಗುತ್ತಿವೆ ಎನ್ನುವ ದೂರಿನ ಬಗ್ಗೆ ಪ್ರಸ್ತಾಪಿಸಿ ಇದನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ವೇದಿಕೆಯ ಮೇಲಿದ್ದ ಕೃಷಿ ಸಚಿವರಿಗೆ ಸ್ಥಳದಲ್ಲೇ ಸೂಚನೆ ನೀಡಿದರು. ಮೈತ್ರಿ ಮತ್ತು ಮನಸ್ವಿನಿ ಯೋಜನೆಯ ಫಲಾನುಭವಿಗಳಿಗೆ ಆದ್ಯತೆಯ ಮೇಲೆ ವಸತಿ ಕಲ್ಪಿಸುವ ಇಂಗಿತ ವ್ಯಕ್ತಪಡಿಸಿದರು. ಎಲ್ಲ ಸಚಿವರು ತಮ್ಮ ಉಸ್ತುವಾರಿ ಜಿಲ್ಲೆಗಳಲ್ಲಿ ಇಂತಹ ಜನಮನ ಕಾರ್ಯಕ್ರಮವನ್ನು ಏರ್ಪಡಿಸಿ ಜನಾಭಿಪ್ರಾಯವನ್ನು ಪಡೆಯಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ವೇದಿಕೆಯಲ್ಲಿದ್ದ ಎಲ್ಲಾ ಸಚಿವರಿಗೆ ಸೂಚನೆ ನೀಡಿದರು.

ಸರ್ಕಾರದ ಮೂರು ವರ್ಷಗಳ ಧ್ಯೇಯ ವಾಕ್ಯ 'ನುಡಿದಂತೆ ನಡೆಯುತ್ತಿದ್ದೇವೆ ... ನಾಲ್ಕನೇ ವರ್ಷದೆಡೆಗೆ ಭರವಸೆಯ ನಡಿಗೆ' ಎನ್ನುವ ಶೀರ್ಷಿಕೆಯಡಿ ನಡೆದ ಈ ಸಮಾವೇಶ ಅರ್ಥಪೂರ್ಣವಾಗಿತ್ತು.



ಚಲನಚಿತ್ರೋದ್ಯಮಕ್ಕೆ ಸಿದ್ದರಾಮಯ್ಯನವರ ಸರ್ಕಾರ ನೀಡಿರುವ ಕೊಡುಗೆ ಬಹಳ ದೊಡ್ಡದು. ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳುವ ಹೊಣೆಗಾರಿಕೆ ನಮ್ಮ ಮೇಲಿದೆ.

**ಹಂಸಲೇಖ,**
**ಹಿರಿಯ ಚಲನಚಿತ್ರ ಸಂಗೀತ ನಿರ್ದೇಶಕರು**